ಅ) ಬೆಂಗಳೂರು ನಗರದಲ್ಲಿ ಸರ್ಕಾರಿ ಬಹುಮಹಡಿ ಕಟ್ಟಡಗಳಲ್ಲಿ ಅಳವಡಿಸಿರುವ ಲಿಫ್ಟ್‌ಗಳು ಆಗಿಂದಾಗ್ಗೆ ಕೆಟ್ಟು ಮಧ್ಯದಲ್ಲಿ ನಿಲ್ಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಿಶ್ವೇಶ್ವರಯ್ಯ ಮುಖ್ಯ ಗೋಪುರದಲ್ಲಿ ಯಾವಾಗ ಲಿಫ್ಟ್‌ಗಳನ್ನು ಅಳವಡಿಸಲಾಗಿದೆ. ಅವುಗಳು ಸುಮಾರು 29 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುತ್ತವೆ.

ಇ) ವಿಶ್ವೇಶ್ವರಯ್ಯ ಮುಖ್ಯ ಗೋಪುರದಲ್ಲಿ ಅಳವಡಿಸಿರುವ ಲಿಫ್ಟ್‌ಗಳು ಪದೇ ಪದೇ ಕೆಟ್ಟು ನಿಲ್ಲುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಬದಲಾಯಿಸಲು ಸರ್ಕಾರ ಆಲೋಚಿಸಿದೆಯೇ;

ಈ) ಹಾಗಿದ್ದಲ್ಲಿ ಬದಲಾವಣೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು;

ಉ) ಪ್ರತಿ ವರ್ಷ ಅಳವಡಿಸುತ್ತಿರುವ ಲಿಫ್ಟ್‌ಗಳನ್ನು ಯಾರು ಪರಿಶೀಲಿಸುತ್ತಾರೆ?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಬಂದಿದೆ.

ಆ) & ಇ) ವಿಶ್ವೇಶ್ವರಯ್ಯ ಮುಖ್ಯ ಗೋಪುರದಲ್ಲಿ ಲಿಫ್ಟ್‌ಗಳು ಕೆಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು ವಿಶ್ವೇಶ್ವರಯ್ಯ ಮುಖ್ಯ ಗೋಪುರದ 2 ಲಿಫ್ಟ್‌ಗಳನ್ನು ಬದಲಾಯಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಹಾಗೂ ಉಳಿದ ಲಿಫ್ಟ್‌ಗಳನ್ನು ಬದಲಾಯಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ) ಸದರಿ ಕಟ್ಟಡದಲ್ಲಿರುವ ಲಿಫ್ಟ್‌ಗಳನ್ನು ಬದಲಾವಣೆ ಮಾಡಲು ಕ್ರಮ ಕೈಗೊಳ್ಳಲಾಗಿದ್ದು, ಈಗಾಗಲೇ 2 ಲಿಫ್ಟ್‌ಗಳನ್ನು ಬದಲಾಯಿಸಲು ಕಾಮಗಾರಿ ಆದೇಶದಂತೆ ಲಿಫ್ಟ್ ಕಂಪನಿಯವರು ಲಿಫ್ಟ್ ಉಪಕರಣಗಳನ್ನು ಸರಬರಾಜು ಮಾಡಲಾಗಿದ್ದು ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಬಾಕಿ 2 ಲಿಫ್ಟ್‌ಗಳನ್ನು ಬದಲಾಯಿಸಲು ಆಡಳಿತಾತ್ಮಕ ಅನುಮೋದನೆ ನೀಡುವುದರಿಂದ ಟೆಂಡರ್ ಅನ್ನು ಕರೆಯಲಾಗಿದೆ.

ಉ) ಕರ್ನಾಟಕ ಮುಖ್ಯ ವಿದ್ಯುತ್ ಪರಿವೀಕ್ಷಣಾಧಿಕಾರಿಗಳ ಕಛೇರಿಯಿಂದ ಪರಿಶೀಲಿಸಲ್ಪಡುತ್ತದೆ.

ಬಿತ್ತನೆ ವಿತರಣೆ

208 (555) ಶ್ರೀ ನರೇಂದ್ರಬಾಬು ನೆ ಲ:(ಮಹಾಲಕ್ಷ್ಮಿ ಲೇಔಟ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ಸಾಲಿನಲ್ಲಿ ರೈತರಿಗೆ ಅಡಚಣೆಯಾಗದಂತೆ ಬಿತ್ತನೆ ಬೀಜವನ್ನು ವಿತರಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಈ ಸಾಲಿನಲ್ಲಿ ಪ್ರತಿ ಜಿಲ್ಲೆಯಲ್ಲಿ ಎಷ್ಟು ಪ್ರಮಾಣದ ಬಿತ್ತನೆ ಬೀಜವನ್ನು ರೈತರಿಗೆ ಪೂರೈಸಲಾಗಿದೆ; ಇದಕ್ಕಾಗಿ ವೆಚ್ಚ ಮಾಡಿರುವ ಹಣವೆಷ್ಟು;

ಇ) ರಾಜ್ಯದ ಕೆಲವು ತಾಲ್ಲೂಕುಗಳಲ್ಲಿ ಸಕಾಲಕ್ಕೆ ಬಿತ್ತನೆ ಬೀಜ ಲಭ್ಯವಾಗದೆ ಹಾಗೂ ದಾಸ್ತಾನು ಇಲ್ಲದೆ ರೈತರು ತೊಂದರೆಗೊಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಇದಕ್ಕೆ ಕಾರಣವಾದ ಬೀಜ ನಿಗಮದ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ (ಪ್ರತಿ ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಶಿವರಾಜ್ ಎಸ್ ತಂಗಡಗಿ(ಕೃಷಿ ಸಚಿವರು):

ಅ) ಪ್ರಸಕ್ತ ಸಾಲಿನಲ್ಲಿ ರೈತರಿಗೆ ಅಡಚಣೆಯಾಗದಂತೆ ಬಿತ್ತನೆ ಬೀಜವನ್ನು ವಿತರಣೆ ಮಾಡಲು ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ:

1. ಬೀಜ ಬದಲಿಕೆ ಅಧಾರದಂತೆ ರಾಜ್ಯಕ್ಕೆ ಬೇಕಿರುವ ವಿವಿಧ ಕೃಷಿ ಬೆಳೆಗಳ ಬಿತ್ತನೆ ಬೀಜಗಳನ್ನು ಇಲಾಖೆಯು ಲೆಕ್ಕ ಮಾಡಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಮತ್ತು ಬೀಜ ವಿತರಣಾ ಸಂಸ್ಥೆಗಳಿಗೆ, ರೈತರಿಗೆ ಸಕಾಲಕ್ಕೆ ಬಿತ್ತನೆ ಬೀಜ ಪೂರೈಸಲು ಕಳುಹಿಸಿಕೊಡಲಾಗುತ್ತದೆ.
2. ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಬೀಜೋತ್ಪಾದಕರ ಮತ್ತು ಬೀಜ ವಿತರಕರ ಸಭೆಯನ್ನು ನಿಯಮಿತವಾಗಿ ನಡೆಸಲಾಗುತ್ತಿದ್ದು, ಬೀಜ ವಿತರಣೆ, ದಾಸ್ತಾನು ಇತ್ಯಾದಿ ವಿಷಯಗಳನ್ನು ದೀರ್ಘವಾಗಿ ಚರ್ಚಿಸಿ ಬಿತ್ತನೆ ಬೀಜದ ಸರಬರಾಜಿಗೆ ಸರ್ಕಾರಿ ಮತ್ತು ಖಾಸಗಿ ಬೀಜ ಸಂಸ್ಥೆಗಳ ಮುಖಾಂತರ ವ್ಯವಸ್ಥೆ ಮಾಡಲಾಗುತ್ತಿದೆ.
3. ಪ್ರಸ್ತುತ ಮುಂಗಾರು ಹಂಗಾಮಿನಲ್ಲಿ ರಾಜ್ಯದ ರೈತರಿಗೆ ರಿಯಾಯಿತಿ ದರದಲ್ಲಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳು ಹಾಗೂ ಗುರುತಿಸಿದ ಮಾರಾಟ ಕೇಂದ್ರಗಳ ಮುಖಾಂತರ ಸಕಾಲದಲ್ಲಿ ಬಿತ್ತನೆ ಬೀಜ ದೊರಕಿಸಲು ವ್ಯವಸ್ಥೆ ಮಾಡಲಾಗಿದೆ.

ಆ) ಈ ಸಾಲಿನ ಮುಂಗಾರು ಹಂಗಾಮಿನಲ್ಲಿ 7,67,990 ಕ್ವಿಂಟಾಲ್ ಬಿತ್ತನೆ ಬೀಜ ವಿತರಣೆಯ ಗುರಿಯಿದ್ದು, ಇದುವರೆಗೆ 2,16,199 ಕ್ವಿಂಟಾಲ್ ಪ್ರಮಾಣದ ಪ್ರಮಾಣೆತೆ/ಗುಣಮಟ್ಟದ ಬಿತ್ತನೆ ಬೀಜವನ್ನು ವಿತರಿಸಲಾಗಿರುತ್ತದೆ. ಇದರ ರಿಯಾಯಿತಿ ವೆಚ್ಚವು ರೂ.3773.63 ಲಕ್ಷಗಳಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಪ್ರಸ್ತುತ ಬೀಜ ವಿತರಣೆಯು ಎಲ್ಲಾ ತಾಲ್ಲೂಕುಗಳಲ್ಲಿ ಪ್ರಾರಂಭವಾಗಿದ್ದು, ಯಾವುದೇ ಬಿತ್ತನೆ ಬೀಜದ ಕೊರತೆ ಕಂಡುಬಂದಿರುವುದಿಲ್ಲ. ಒಟ್ಟು 149516.18 ಕ್ವಿಂಟಾಲ್ ಪ್ರಮಾಣದ ಬಿತ್ತನೆ ಬೀಜವನ್ನು ವಿವಿಧ ಮಾರಾಟ ಕೇಂದ್ರಗಳಲ್ಲಿ ದಾಸ್ತಾನೀಕರಿಸಲಾಗಿದ್ದು ರೈತರಿಗೆ ಬಿತ್ತನೆ ಬೀಜ ಲಭ್ಯತೆಯಲ್ಲಿ ತೊಂದರೆಯಾಗಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ. ಕರ್ನಾಟಕ ರಾಜ್ಯ ಬೀಜ ನಿಗಮದ ಜೊತೆಗೆ ಇತರೆ ಸರ್ಕಾರಿ ಹಾಗೂ ಖಾಸಗಿ ವಲಯದ ಬೀಜ ವಿತರಣಾ ಸಂಸ್ಥೆಗಳಿಂದ ಬಿತ್ತನೆ ಬೀಜ ದಾಸ್ತಾನೀಕರಿಸಿ ವಿತರಿಸಲು ವ್ಯವಸ್ಥೆ ಮಾಡಲಾಗಿದೆ.

ಅನುಬಂಧ

Crop wise quantity of seeds distributed under subsidy during Kharif-2010 (Provisional)

As on: 22-06-2010 **Quantity in quintals, Subsidy in lakh Rupees**

Sl. No.	District	Quantity distributed															Total subsidy	No.of Beneficiarie
		Paddy	Hy.Paddy	Jowar	Ragi	Maize	Bajra	Redgram	B.gram	Gr.gram	Cowpea	Gr.nut	Sunflower	Soybean	Castor	Total		
1	Bagalkote			24.33		2227.90	277.89	149.85		392.75		14.40	102.34	138 1.08		4570.54	114.83	31504
2	Bangalore ®	49.60			24.70	217.20		76.75			8.40	119.60				496.25	10.90	778
3	Banglore (U)	23.47			1.15			20.85			1.35	20.70				67.25	1.36	200
4	Belgau	313		544		475	171	29.		235		10.0	25.	256		3455	490	45

	m	8.40		.50		1.00	.00	20		.60		0	10	50.00		4.80	.28	800
5	Bellary	536.00		283.60		1192.00	30.31	38.85		15.80		350.00	10.72			2457.28	50.09	10560
6	Bidar	164.85	1618.77			61.10	27.04	1639.83	1608.00	1168.05			24.34	23073.10		29385.08	504.26	64234
7	Bijapur					850.50	75.50	35.50	0.40	18.50		115.00	45.00			1140.40	31.66	1577
8	Chamarajanagar			180.47	3.50	90.00		2.40	75.86	70.85	21.50	2285.10	345.70			3075.38	68.26	22492
9	Chikballapur	689.20			129.25	325.75		364.35				1887.60				3396.15	56.62	11470
10	Chikmagalur	1498.05		68.65		1300.46		38.40	35.40	149.10	5.50	776.17	217.41			4089.14	84.96	21711
11	Chitrad	359.		123	0.3	546		378		207	2.0	155	83.			2219	360	51

1	urga	70		.20	0	9.15		.10		.60	5	69.90	99			3.99	.18	970
12	D.Kannada	388.55														388.55	3.88	981
13	Davanagere			293.06		7961.31	9.99	166.45		10.30	5.35					8446.46	213.26	63895
14	Dharwad	1185.15	0.19	16.05		794.35		54.75	25.50	244.55	12.80	813.90		4388.90		7536.14	107.96	12450
15	Gadag			115.15		1417.50	45.10	155.25		1654.35		251.90	15.08			3654.33	117.00	9660
16	Gulbarga	15.00		16.20		10.50	40.00	58.40	117.10	102.45				2.40		362.05	14.29	1469 4
17	Hassan	1284.99		136.90	24.35	1984.33		54.90	132.55	385.60	213.60	120.40	63.77			4401.39	97.30	42825
1	Haveri	720		248		136		375	2.8	395	0.6	915.		252		2532	491	76

8		0.00		.00		70.10		.00	0	.00	5	00		0.00		6.55	.49	206
19	Kodagu	162.70				334.00										496.70	9.97	3844
20	Kolar	988.73			213.20	8.00		191.90			16.30	1586.50				3004.63	40.34	9686
21	Koppal	1232.00		97.00		1239.00	1084.00	57.00		284.00			132.50			4125.50	108.54	70585
22	Mandya															0.00		
23	Mysore			84.29	7.90	208.55		14.90	95.48	88.30	156.50	90.70	3.98			750.60	20.91	8468
24	Raichur	2927.90				0.65	472.20	350.60		100.10		60.00	287.74		2.90	4202.09	97.30	22410
25	Ramanagar	373.00			22.55	3.15		79.85			8.90	199.00				686.45	9.73	2551

26	Shimoga	9107.30		14.08		5576.95		31.45								14729.78	225.82	4989 5
27	Tumkur	1037.70		35.65	31.05	218.00		714.43	23.32	691.24	17.25	22000.00	18.74			24787.38	340.16	48300
28	Udupi	1852.90														1852.90	17.78	4439
29	Ut.Kannada	4933.28				355.20										5288.48	67.16	13415
30	Yadagir	403.00		0.20		1.00	16.50	101.10	15.00	196.30						733.10	17.34	3361
	STATE TOTAL	39551.47	0.19	3900.10	457.95	5026765	2249.53	5180.06	2131.41	6410.44	470.15	47185.87	1376.41	5701548	2.90	21619961	3773.63	719961